ಕೃಷಿ ಫಾರಂನ ಉದ್ದೇಶ

988 (1105) ಶ್ರೀ ಜಯಚಂದ್ರ ಟಿ.ಬಿ. (ಶಿರಾ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿರಾ ತಾಲ್ಲೂಕು, ಚಿಕ್ಕನಹಳ್ಳಿಯ ಕೃಷಿ ಫಾರಂನ್ನು ಯಾರು, ಯಾವ ಉದ್ದೇಶಕ್ಕೆ ಯಾವ ಸರ್ಕಾರಿ ಆದೇಶದ ಪ್ರಕಾರ ದಾನ ಮಾಡಲಾಗಿದೆ; ಹಾಗಿದ್ದಲ್ಲಿ, ಸರ್ಕಾರದವರು ದಾನಿಗಳ ಮೂಲ ಉದ್ದೇಶ ದಂತೆ ಈ ಫಾರಂನ್ನು ನಡೆಸುತ್ತಿದ್ದಾರೆಯೇ;

ಆ) ಯಾವ ಕಾರಣಕ್ಕೆ ಅವೈಜ್ಞಾನಿಕವಾಗಿ ನೀರಾವರಿ ಜಮೀನಿನಲ್ಲಿ ಜತ್ರೋಪಗಿಡಗಳನ್ನು ಬಳೆಸಿ, ದಾನಿಗಳ ಮೂಲ ಉದ್ದೇಶವನ್ನೇ ಏಕೆ ಕಡೆಗಣಿಸಲಾಗಿದೆ;

ಇ) ಇನ್ನು ಮುಂದಾದರೂ ಜತ್ರೋಪ ಗಿಡಗಳನ್ನು ತೆಗೆಸಿ, ದಾನಿಗ ಮೂಲ ಉದ್ದೇಶ ಹಾಗೂ ಸರ್ಕಾರಿ ಆದೇಶಗಳ ಸರ್ಕಾರ ನಡೆಸಲು ಕ್ರಮ ಕೈಗೊಳಲಾಗುವುದೇ;

ಈ) 66 ಎಕರೆ ವಿಸ್ತೀರ್ಣದ ಈ ಕೃಷಿ ಕ್ಷೇತ್ರದಲ್ಲಿ ರಾಜ್ಯದ ಮೊದಲ ರೈತರ ತರಬೇತಿ ಕೇಂದ್ರ ಕಾರ್ಯನಿರ್ವಹಿಸುತ್ತಿದ್ದು, ಪ್ರಾಯೋಗಿಕ ತರಬೇತಿಗೆ ಅಗತ್ಯವಾದ ಸಸ್ಯ ಆರೋಗ್ಯ ಕೇಂದ್ರ ಹಾಸ್ಟಲ್‌ಗಳು, ವಸತಿಗಳು ಮತ್ತು ಎಲ್ಲಾ ಮೂಲಭೂತ ಸೌಕರ್ಯವಿರುವುದರಿಂದ, ಇಲ್ಲಿ ಕೃಷಿ ಡಿಪ್ಲೋಮೊ ಕೋರ್ಸ್ ತೆರೆಯಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು) :

ಅ) ಸಿರಾ ತಾಲ್ಲೂಕು, ಚಿಕ್ಕನಹಳ್ಳಿಯ ಕೃಷಿ ಫಾರಂನ್ನು ದಿವಂಗತ ಶ್ರೀ ಉಗ್ರೇಗೌಡರು ರೈತ ಮಕ್ಕಳಿಗೆ ಆಧುನಿಕ ಕೃಷಿ ಪದ್ದತಿಯಲ್ಲಿ ಪ್ರಾಯೋಗಿಕ ತರಬೇತಿ ನೀಡುವ ಉದ್ದೇಶಕ್ಕಾಗಿ ಕೃಷಿ ವಸತಿ ಪಾಠಶಾಲೆ ಕಟ್ಟಿಸಿದರು. ನಂತರ ದಿವಂಗತ ಶ್ರೀ ಉಗ್ರೇಗೌಡರು ಬರೆದ ರಿಜಿಷ್ಟರ್ಡ್ ವಿಲ್‌ನಂತೆ ಹಾಗೂ ದಿ: 19-08-1922 ಡಿ.1769/71/ಎ ಮತ್ತು ಇ.40-22-2ರ ಸರ್ಕಾರಿ ಆದೇಶದ ಪ್ರಕಾರ ಮೈಸೂರು ಮಹಾರಾಜರ ಸರ್ಕಾರಕ್ಕೆ ದಾನ ಮಾಡಿರುತ್ತಾರೆ. ಅಂದಿನಿಂದ ರಾಜ್ಯ ಸರ್ಕಾರದವರು ದಾನಿಗಳ ಮೂಲ ಉದ್ದೇಶದಂತೆ ಈ ಫಾರಂನ್ನು ನಡೆಸುತ್ತಿದ್ದಾರೆ.

ಆ) ಸದರಿ ಕೃಷಿ ಕ್ಷೇತ್ರದಲ್ಲಿರುವ ನೀರಾವರಿ ಜಮೀನಿನಲ್ಲಿ ಬೀಜೋತ್ಪದನಾ ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತಿದೆ. ಮಳೆಯಾಶ್ರಿತ

ಪ್ರದೇಶಗಳಲ್ಲಿ ಬೆಳೆಗಳ ಇಳುವರಿಯು ಮಳೆಯ ಭಾವದಿಂದ ಏರುಪೇರು ಆಗುತ್ತಿದ್ದುದರಿಂದ ಬೀಜೋತ್ಪಾದನಾ ಕಾರ್ಯಕ್ರಮಕ್ಕೆ ಬದಲಾಗಿ ಜೈವಿಕ ಇಂಧನ ಬೆಳೆಯಾದ ಜತ್ರೋಪ ಗಿಡಗಳನ್ನು ಬೆಳೆಸಲಾಗಿದೆ. ಇತ್ತೀಚೆಗೆ ಇಂಧನದ ಕೊರತೆಯು ಕ್ರಮೇಣ ಹೆಚ್ಚಾಗಿರುವುದರಿಂದ ಪರ್ಯಾಯ ಇಂಧನದ ಮೂಲಗಳನ್ನು ಸಮರ್ಪಕವಾಗಿ ಬಳಕೆ ಮಾಡಬೇಕೆಂಬ ಹಿನ್ನಲೆಯಲ್ಲಿ ಖುಷ್ಕಿ ಪ್ರದೇಶಗಳಲ್ಲಿ ಜತ್ರೋಪ ಗಿಡಗಳನ್ನು ಬೆಳೆಸಲಾಗಿದೆ.

ಇ) ಜತ್ರೋಪ ಗಿಡಗಳನ್ನು ಬೆಳೆದಿರುವ ಖುಷ್ಕಿ ಪ್ರದೇಶಗಳಲ್ಲಿ ನೀರಾವರಿ ಸೌಲಭ್ಯಗಳನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಒಂದು ಕಾರ್ಯಕ್ರಮವನ್ನು ರೂಪಿಸಿ ಆ ಪ್ರದೇಶದಲ್ಲಿ ಬೀಜೋತ್ಪಾದನಾ ಕಾರ್ಯಕ್ರಮವನ್ನು ಪುನರ್ ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ. ನಂತರ ಜತ್ರೋಪ ಗಿಡಗಳನ್ನು ಹಂತ ಹಂತವಾಗಿ ತೆಗೆಸಿ ಒಟ್ಟಾರೆ ವಿಸ್ತೀರ್ಣವನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲಾಗುವುದು.

ಈ) ತುಮಕೂರು ಜಿಲ್ಲೆಯ ಶಿರಾ ತಾಃ ಚಿಕ್ಕನಹಳ್ಳಿಯಲ್ಲಿರುವ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಕೃಷಿ ಡಿಪ್ಲೋಮಾ ಕೋರ್ಸ್ ತೆರೆಯುವ ಪ್ರಸ್ತಾವನೆ ಸದ್ಯಕ್ಕೆ ಇಲ್ಲ.

ರೈತರ ತರಬೇತಿ ಕೇಂದ್ರ

989 (1106) ಶ್ರೀ ಜಯಚಂದ್ರ ಟಿ.ಬಿ. (ಶಿರಾ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಾ ತಾಲ್ಲೂಕು ಚಿಕ್ಕನಹಳ್ಳಿಯ ಶ್ರೀ. ಉಗ್ರೇಗೌಡರ ಸ್ಮಾರಕ ರೈತರ ತರಬೇತಿ ಕೇಂದ್ರದಲ್ಲಿ ಅತಿಥಿ ಉಪನ್ಯಾಸಕರಿಗೆ ಕೇವಲ ರೂ.200/- ಗಳ ಗೌರವ ಧನ ನೀಡುತ್ತಿದ್ದು, ಗೌರವ ಧನ ಹೆಚ್ಚಿಸಿ, ನುರಿತ ವಿಷಯ ತಜ್ಞರಿಂದ, ಹೊಸ ತಂತ್ರಜ್ಞಾನದೊಂದಿಗೆ ಪ್ರಾಯೋಗಿಕ ತರಬೇತಿ ನೀಡಲು ಕ್ರಮ ಕೈಗೊಳ್ಳಲಾಗುವುದೇ?

ಆ) ಈ ತರಬೇತಿಗೆ ಬರುವ ರೈತರನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಆಕರ್ಷಿಸಲು, ಮೂಲಭೂತ ಸೌಕರ್ಯ ಒದಗಿಸಲು, ಅಗತ್ಯ ವಸ್ತುಗಳ ಬೆಲೆ ಹೆಚ್ಚಾಗಿರುವ ಕಾರಣ, ದಿನಭತ್ಯೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದೇ?

ಇ) ಹಿಂದಿನಂತೆಯೇ ರೈತರನ್ನು ಈ ತರಬೇತಿ ಕೇಂದ್ರಕ್ಕೆ ಕರೆತರಲು ಹಾಗೂ ಪ್ರಗತಿ ಪರ ರೈತರ ತಾಲ್ಲೂಕುಗಳಿಗೆ ಮತ್ತು ವಿವಿಧ ಕೃಷಿ ಕ್ಷೇತ್ರಗಳಿಗೆ